ಸುವರ್ಣ ಸಂಭ್ರಮ 50

# ನಿಮ್ಮೊಡನೆ

## ಹಬ್ಬದ ಸಡಗರವೂ, ಪೇಟೆಯ ಮಾಯೆಯೂ...

**ಹಬ್ಬವೆಂದರೆ ನೆಂಟರಿಷ್ಟರು, ಬಂಧುಗಳನ್ನು ಮನೆಗೆ ಕರೆದು ಊಟ, ಮಾತು ಹಂಚಿಕೊಳ್ಳುವ ಸದವಕಾಶವೂ ಹೌದು. ಆದರೆ ಬೆಲೆಯೇರಿಕೆಯ ಬಿಸಿ ಯಾವ ಮಟ್ಟಕ್ಕೆ ಮುಟ್ಟಿದೆಯೆಂದರೆ ನೆಂಟರು ಬರುವ ಸುದ್ದಿಯೇ ಈಗ ದುಃಸ್ವಪ್ನವಾಗಿ ಪರಿಣಮಿಸಿದೆ.**

ಶ್ರಾವಣ ಎಂಬುದು ಸಂಭ್ರಮಾಚರಣೆಗಳಿಗೆ ತೋರಣ. ಹಬ್ಬಗಳ ಸಾಲನ್ನು ಬೆನ್ನಿಗಿಟ್ಟುಕೊಂಡು ಬರುವ ಮಾಸ. ಮನೆಯಲ್ಲಿ ಉಂಡಿ, ಚಕ್ಕುಲಿಯಂಥ ತಿನಿಸುಗಳ ಸುಗ್ಗಿ. ಮಾರುಕಟ್ಟೆಯಲ್ಲಿ ವಹಿವಾಟಿನ ಹಿಗ್ಗು. ಹೂವು –ಹಣ್ಣುಗಳಿಗೆ ಇನ್ನಿಲ್ಲದ ಬೇಡಿಕೆ. ಆದರೆ ಹಬ್ಬಗಳ ಹಿಗ್ಗನ್ನು ಕುಗ್ಗಿಸುತ್ತಿದೆ ಬೆಲೆ ಏರಿಕೆಯ 'ಭೂತ'. ಹಬ್ಬ –ಆಚರಣೆಗಳ ಋತುವಿನಲ್ಲಿ ಹೂವು, ಹಣ್ಣು, ತರಕಾರಿಗಳ ಬೆಲೆ ದಿಢೀರನೆ ಹೊಸ ಎತ್ತರಗಳಿಗೆ ಜಿಗಿಯುವುದು ಇದಕ್ಕೆ ಕಾರಣ. ಗ್ರಾಹಕರಿಗೆ ಖರೀದಿಸಲೇಬೇಕಾದ ಒತ್ತಡ. ಅವರ ಅನಿವಾರ್ಯ, ವ್ಯಾಪಾರಿಗಳಿಗೆ ಶೋಷಣೆಯ ಅಸ್ತ್ರವಾಗಿ ಪರಿಣಮಿಸಿದೆ. ಸಣ್ಣಮಟ್ಟದ ಏರಿಕೆ ನಿರೀಕ್ಷಿತವೇ. ಅದನ್ನು ಭರಿಸಲು ಗ್ರಾಹಕರು ಮಾನಸಿಕವಾಗಿ ಸಿದ್ಧರಾಗಿರುತ್ತಾರೆ. ಆದರೆ ರಾಕೆಟ್‌ನಂತೆ ರೊಯ್ಯನೆ ಜಿಗಿಯುವುದಿದೆಯಲ್ಲ, ಅದು ಜನಸಾಮಾನ್ಯರ ನೆಮ್ಮದಿ ಕದಡುವಂಥದ್ದು. ಪರಿಸ್ಥಿತಿಯ ದುರ್ಲಾಭ ಪಡೆಯುವ ಮನಸ್ಥಿತಿ ಇತ್ತೀಚಿನ ವರ್ಷಗಳಲ್ಲಿ ವಿಪರೀತಕ್ಕೆ ಹೋಗಿದೆ.

ವರಮಹಾಲಕ್ಷ್ಮಿ ಹಬ್ಬದ ಹಿಂದಿನ ದಿನ ಮಾರುಕಟ್ಟೆಗೆ ಹೋಗಿ ಹೂವು, ಹಣ್ಣು, ತರಕಾರಿಗಳನ್ನು ಮುಟ್ಟಿದವರು, ಸಚೇತನ ವಿದ್ಯುತ್ ತಂತಿ ಮುಟ್ಟಿದಂತೆ ಆಘಾತಕ್ಕೆ ಒಳಗಾಗಿದ್ದೇ ಹೆಚ್ಚು. ಕನಕಾಂಬರ ಹೂವಿನ ಬೆಲೆ ಕೆ.ಜಿ.ಗೆ ಸಾವಿರದಿಂದ ಸಾವಿರದ ಐನೂರು ರೂಪಾಯಿ. ಸೇವಂತಿಗೆ ದರ ಕೆ.ಜಿ.ಗೆ 400ರಿಂದ 500 ರೂಪಾಯಿ. ವೀಳ್ಯದೆಲೆ ಕಟ್ಟಿಗೆ 80 ರೂಪಾಯಿ. ಏಲಕ್ಕಿ ಬಾಳೆಹಣ್ಣಿಗೆ ಕೆ.ಜಿ.ಗೆ 80 ರೂಪಾಯಿ ಬಿಚ್ಚಬೇಕಾದ ಸ್ಥಿತಿ. ತರಕಾರಿ ಬೆಲೆಯೂ ದುಪ್ಪಟ್ಟು. ಎರಡು ದಿನಗಳ ಅಂತರದಲ್ಲಿ ಪ್ರತಿಶತ 50ರಿಂದ 100ರಷ್ಟು ಬೆಲೆ ಜಿಗಿತ!

ಈ ಏರಿಕೆ ಮೇಲ್ನೋಟಕ್ಕೇ 'ಹಗಲು ದರೋಡೆ'ಯಂತೆ ಕಾಣಿಸುತ್ತದೆ. ಬೆಲೆಯಲ್ಲಿನ ಇಂತಹ 'ಠೇಂಕಾರ' ಹಬ್ಬದ ಸಂಭ್ರಮ ಕುಗ್ಗಿಸದಿರುವುದೆ? ಹಬ್ಬ ಮುಗಿದ ಮಾರನೆಯ ದಿನವೇ ಬೆಲೆ ಪುನಃ ಹಿಂದಿನ ಸ್ಥಿತಿಗೆ ಹೊರಳುತ್ತದೆ. ಅಂದರೆ ಇಲ್ಲಿ ಬೇಡಿಕೆ – ಪೂರೈಕೆಯ ನಿಯಮಕ್ಕಿಂತ ಮಧ್ಯವರ್ತಿಗಳ ಮೇಲಾಟವೇ ನಿರ್ಣಾಯಕ ಪಾತ್ರ ವಹಿಸುತ್ತದೆ! ಆದರೆ ಈ ವಿದ್ಯಮಾನಗಳ ಬಗ್ಗೆ ಸರ್ಕಾರಕ್ಕೆ ಜಾಣ ಕುರುಡು. ತಮಗೂ ಇದಕ್ಕೂ ಸಂಬಂಧವೇ ಇಲ್ಲ ಎಂಬಂತಿದೆ ರಾಜ್ಯ –ಕೇಂದ್ರ ಸರ್ಕಾರಗಳ ವರ್ತನೆ. ಶ್ರಾವಣಕ್ಕೆ ಹೇಗೆ ಬೇರೆ ಬೇರೆ ಮುಖಗಳಿವೆಯೋ ಬೆಲೆ ಏರಿಕೆಯೂ ಬಹುರೂಪಿ. ಓಣಿಗೊಂದು 'ನೀತಿ'. ನಾಲ್ಕು ಮಂದಿ ಸೇರಿ ನಿಗದಿಗೊಳಿಸಿದ್ದೇ ದರ. ಬೀದಿ ಬದಿ ವ್ಯಾಪಾರದಲ್ಲೂ 'ಕೆಟ್ಟ' ಒಗ್ಗಟ್ಟು. ನಿಯಂತ್ರಣ ಶಕ್ತಿ ದೂರದಲ್ಲಿ ಎಲ್ಲೋ ಇರುತ್ತದೆ. ಒಂದೇ ಮಾತು, ಒಂದೇ ದರ. ಚೌಕಾಸಿ ಪ್ರಶ್ನೆಯೇ ಇಲ್ಲ. ಅವರನ್ನು ನೋಡಿದಾಕ್ಷಣ ಚೌಕಾಸಿಯ ಉಮೇದೂ ಉಳಿಯುವುದಿಲ್ಲ. ಕೆಲವೊಮ್ಮೆ ದೊಡ್ಡ ದೊಡ್ಡ ಬಜಾರ್ –ಮಾಲ್‌ಗಳೇ ಜೇಬಿಗೆ ಹಿತವೆನಿಸುವುದುಂಟು. ಆದರೆ ಒಬ್ಬಿಬ್ಬರು ಇರುವ ಚಿಕ್ಕ ಕುಟುಂಬಗಳ ದೈನಂದಿನ ಸಣ್ಣಪುಟ್ಟ ಅಗತ್ಯಗಳಿಗೆಲ್ಲ ಮಾಲ್‌ಗಳನ್ನು ಅವಲಂಬಿಸಲು ಆಗುತ್ತದೆಯೆ?

ಬೇಕೆಂದಾಗ, ಬೇಕಾದಂತೆ ಏರಿಕೆಯಾಗುವ ಈ ದರದಲ್ಲಿ ಉತ್ಪಾದಕನಿಗೆ ಪಾಲು ದೊರೆಯುವುದೆ? ಖಂಡಿತ ಇಲ್ಲ. ಈ ವಿಷಯದಲ್ಲಿ ಬೆಳೆಗಾರ ನಿಸ್ಸಂದೇಹವಾಗಿ 'ಬಡಪಾಯಿ'ಯೇ ಹೌದು. ಬೆಳೆದವರ ಹಿತ ರಕ್ಷಣೆಯೂ ಆಗುವುದಿಲ್ಲ. ಬಳಕೆದಾರರ ಶೋಷಣೆಯೂ ತಪ್ಪುವುದಿಲ್ಲ. ಇಬ್ಬರಿಗೂ ಸೇತುವೆಯಾಗಿರುವ ಕೆಲವೇ ಮಂದಿ ಮಧ್ಯವರ್ತಿಗಳದೇ ರಾಜ್ಯಭಾರ. ಶೋಷಣೆಯ ಈ ಕೊಂಡಿ ಕಳಚಿದರೆ ಬಹುದೊಡ್ಡ ಸಂಖ್ಯೆಯಲ್ಲಿರುವ ಎರಡೂ ವರ್ಗದ ಜನರಿಗೆ ಮಹದುಪಕಾರ ಆಗುತ್ತದೆ. ಆದರೆ ಜನಸಾಮಾನ್ಯರ ಮೇಲಿನ ಕರಭಾರವನ್ನೇ ನಂಬಿಕೊಂಡು ಬದುಕುತ್ತಿರುವ ಸರ್ಕಾರಗಳಿಗೆ ಪ್ರಜೆಗಳ ಈ ಸಂಕಷ್ಟ ಅರ್ಥವಾಗುವುದಿಲ್ಲ. ಹಬ್ಬವೆಂದರೆ ನೆಂಟರಿಷ್ಟರು, ಬಂಧುಗಳನ್ನು ಮನೆಗೆ ಕರೆದು ಊಟ, ಮಾತು ಹಂಚಿಕೊಳ್ಳುವ ಸದವಕಾಶವೂ ಹೌದು. ಆದರೆ ಬೆಲೆಯೇರಿಕೆಯ ಬಿಸಿ ಯಾವ ಮಟ್ಟಕ್ಕೆ ಮುಟ್ಟಿದೆಯೆಂದರೆ ನೆಂಟರು ಬರುವ ಸುದ್ದಿಯೇ ಈಗ ದುಃಸ್ವಪ್ನವಾಗಿ ಪರಿಣಮಿಸಿದೆ. 'ಯಾಕಪ್ಪಾ ಈ ಹಬ್ಬಗಳು ಬರುತ್ತವೆ..' ಎನ್ನುವಂತಿದೆ. ಜನಸಾಮಾನ್ಯರ ದುಃಖ– ದುಮ್ಮಾನ ಆಳುವವರಿಗೆ ಹೇಗೆ ಗೊತ್ತಾಗಬೇಕು?

■ ಎನ್.ಉದಯಕುಮಾರ್


ಈಶ್ವರ್